# ಅಡುಗೆ ಮನೆಗೆ ಮುಗಿಲ ಮಲ್ಲಿಗೆಯ ಅಲಂಕಾರ

ಅಲಂಕಾರಿಕ ತಟೆಗಳನ್ನು ಮಾಡುವುದು ಕೂಡ ಸುಲಭ. ಆದರೆ ಕೈಚಳಕ, ಚಾಕಚಕ್ಯತೆ, ಸೃಜನಶೀಲ ಮನಸ್ಸು ಮುಖ್ಯ.

■ ಚಿತ್ರ- ಬರಹ: ಲೀಲಾ ಚಂದ್ರಶೇಖರ





ಮನೆಯ ಒಳಾಂಗಣ ಅಲಂಕಾರ ಎಷ್ಟು ವೈವಿಧ್ಯಮಯ. ಕೆಲವು ಮಹಿಳೆಯರಿಗೆ ಅದೊಂದು ಹವ್ಯಾಸವಾದರೆ ಇನ್ನು ಕೆಲವರಿಗೆ ಸಮಯದ ಸದುಪಯೋಗ ಪಡಿಸಿಕೊಳ್ಳುವ ದಾರಿ. ಹಾಲ್ ಇರಲಿ, ಡೈನಿಂಗ್ ರೂಮ್ ಇರಲಿ, ಬಣ್ಣದ ಕರ್ಟನ್, ಹೂವಿನ ಕುಂಡ, ಬಾಗಿಲ ಮೇಲೆ ಅಲಂಕಾರಿಕ ಸಾಮಗ್ರಿ ಹಾಕಿ ಒಪ್ಪ ಓರಣ ಮಾಡಿಕೊಂಡರೆ ಅದೆಷ್ಟೋ ಸಮಾಧಾನ ಸಂತೃಪ್ತಿ ಕೆಲವು ಮಹಿಳೆಯರಿಗೆ.

ಇಲ್ಲಿದೆ ಡೈನಿಂಗ್ ಟೇಬಲ್ ಮೇಲೆ ಮುಗಿಲ ಮಲ್ಲಿಗೆಯ ಹೂವಿನ ಅಲಂಕಾರದಿಂದ ಕಂಗೊಳಿಸುವ ತಟ್ಟೆಗಳು. ಈ ಅಲಂಕಾರಿಕ ತಟೆಗಳನ್ನು ಮಾಡುವುದು ಕೂಡ ಸುಲಭ. ಆದರೆ ಕೈಚಳಕ, ಚಾಕಚಕ್ಯತೆ, ಸೃಜನಶೀಲ ಮನಸ್ಸು ಮುಖ್ಯ.

ಗುಲಾಬಿ, ಮಲ್ಲಿಗೆ ಹೂವುಗಳನ್ನು ಬಳಸಿ ಮಾಡಿದ ತಟ್ಟೆ ಅಲಂಕಾರಕ್ಕೆ ಬೇಕಾಗುವ ಸಾಮಗ್ರಿಗಳು ಇಷ್ಟು. ಒಂದು ಅಗಲವಾದ ಸಣ್ಣ ಅಂಚಿರುವ ದೊಡ್ಡಸ್ಟೀಲ್ ತಟ್ಟೆ. ಮುಗಿಲ ಮಲ್ಲಿಗೆ ಹೂವಿನ ಕಡ್ಡಿಗಳನ್ನು ಹಿಡಿದು ಎರಡು ಮೂರು ಹಿಡಿಯಷ್ಟು ಹೂವು ಇರಲಿ. (ಹೆಚ್ಚಾಗಿಯೇ ಇರಲಿ) ಎಂಟು ಕೆಂಪು ಗುಲಾಬಿ, ಮಧ್ಯಕ್ಕೆ ಹಳದಿ ಮತ್ತು ಕೆಂಪು ಮಿಶ್ರಿತ ಹೂವು ಒಂದು ಗುಲಾಬಿ, ಸ್ವಲ್ಪ ಹಳದಿ ಗುಲಾಬಿಯ ಪೆಟಲ್ಸ್ ಅಥವಾ ದಳಗಳು. ಮುಗಿಲ ಮಲ್ಲಿಗೆ ಗಿಡದ ಎಲೆಗಳು ಅಂಗೈಯಷ್ಟುದ್ದ ಇರುವಂತೆ ಕತ್ತರಿಸಿ ತನ್ನಿ. ಈ ಎಲೆಗಳು ನೋಡಲು ತುಂಬಾ ಆಕರ್ಷಕವಾಗಿರುತ್ತದೆ.

ತಟ್ಟೆಗೆ ಮಲ್ಲಿಗೆ ಗಿಡದ ಎಲೆಗಳನ್ನು ಕಡ್ಡಿಗಳು ಒಳಗೆ ಬರುವಂತೆ ಎಲೆಗಳು ತಟ್ಟೆ ಅಂಚಿಗೆ ಬರುವಂತೆ ಸುತ್ತಲೂ ಇಡಿ. ಆದರೆ ಮೇಲೆ ಇನ್ನೊಂದು ಪದರ ಹೀಗೆಯೇ ಇಡಿ. ಇದರ ಮೇಲೆ ಸ್ವಲ್ಪ ನೀರು ಚಿಮುಕಿಸಿ. ಮಧ್ಯದಲ್ಲಿ ಡಬಲ್ ಕಲರ್ ಗುಲಾಬಿ ಹೂವನ್ನು ಇಡಿ, ಸುತ್ತಲೂ ಎಂಟು ಕೆಂಪು ಗುಲಾಬಿಗಳನ್ನು ಜೋಡಿಸಿ. ಮುಗಿಲ ಮಲ್ಲಿಗೆ ಹೂವುಗಳನ್ನು ಮೊದಲು ತಟ್ಟೆಯ ಅಂಚಿಗೆ ಹೂವು ಬರುವಂತೆ ಜೋಡಿಸಿರಿ, ಈಗ ಕೆಲವು ಹೂವುಗಳ ಅರ್ಧ ಕಡ್ಡಿಯನ್ನು ಮುರಿದು ಗುಲಾಬಿ ಹೂವಿನ ಸುತ್ತಲೂ, ಮೊದಲು ಜೋಡಿಸಿದ ಎರಡು ಹೂವುಗಳ ಮಧ್ಯದಲ್ಲಿ ಬರುವಂತೆ ಇಡಿ. ಹಳದಿ ಬಣ್ಣದ ಗುಲಾಬಿ ಪೆಟಲ್ಸ್ ಗಳನ್ನು ಸಣ್ಣ ವೃತ್ತದ ಸುತ್ತಲೂ ಹರಡಿ. ಈ ತಟ್ಟೆಯನ್ನು ಡೈನಿಂಗ್ ಟೇಬಲ್ ಮೇಲೆ ಇಡಿ. ಈ ಹೂವಿನ ಪರಿಮಳ ಅವರ್ಣನೀಯವಾಗಿರುತ್ತದೆ. ಮನಸ್ಸು ಉಲ್ಲಾಸದಿಂದಿರುತ್ತದೆ. ಹಬ್ಬಗಳಲ್ಲಿ ಇದೇ ತರಹ ಮಾಡಿ ಮಧ್ಯದ ಹೂವನ್ನು ತೆಗೆದು ಒಂದು ಚಿಕ್ಕ ಬೆಳ್ಳಿ ದೀಪವನ್ನು ಹಚ್ಚಿ ಇಟ್ಟು ಆರತಿತಟ್ಟೆ ಬಳಸಬಹುದು.

ನೈಸರ್ಗಿಕ ಹೂವುಗಳಲ್ಲದೆ ಕೃತಕ ವಸ್ತುಗಳಿಂದ ಹೂವಿನ ಚಿತ್ತಾರ ಬಿಡಿಸಬಹುದು. ತಾಂಬೂಲ ಕವರ್ ನಿಂದ ಮಾಡಿದ ಹೂಗಳು ಅಡುಗೆ ಮನೆ, ಡೈನಿಂಗ್ ಟೇಬಲ್ ಅಲಂಕಾರಕ್ಕೆ ಸೂಕ್ತವಾದವು. ಒಂದು ಸ್ಟೀಲ್ ತಟ್ಟೆ ತೆಗೆದುಕೊಂಡು, ಅದಕ್ಕೆ ಐದು ಗುಲಾಬಿ ಬಣ್ಣದ ಪೇಪರ್ ಹೂವುಗಳು, ಐದು ಹಸಿರು ಎಲೆಗಳು, ಬಂಗಾರ ಬಣ್ಣದ ಇನ್ವಿಟೇಶನ್ ಕಾರ್ಡ್ ಸ್ವಲ್ಪ, ಹಸಿರು ಕಲರ್ ಪೇಪರ್ ಸ್ವಲ್ಪ, ಗುಲಾಬಿ ಬಣ್ಣದ ಪೇಪರ್ ಸ್ವಲ್ಪ, ಕತ್ತರಿ, ಅಂಟು, ಕೆಂಪು ಬಣ್ಣದ ಪೆನ್ಸಿಲ್.. ಇವಿಷ್ಟನ್ನು ಜೋಡಿಸಿಕೊಳ್ಳಿ. ಗುಲಾಬಿ ಬಣ್ಣದ ಕವರ್ ನಿಂದ 3 x 2 ಇಂಚಿನ ಅಳತೆಯ ಐದು ಪೀಸ್ ಗಳನ್ನು ಮಾಡಿಕೊಳ್ಳಿ. ಹಸಿರು ಬಣ್ಣದ ಕವರ್ ನಿಂದ 2 x 2 ಇಂಚಿನ ಅಳತೆಯ ಐದು ಪೀಸ್ ಗಳನ್ನು ಮಾಡಿಕೊಳ್ಳಿ.ಹಳದಿ ಇನ್ವಿಟೇಶನ್ ಕಾರ್ಡ್ ನಿಂದ ಐದು ಹೂವಿನ ದಳಗಳನ್ನು ಕತ್ತರಿಸಿಟ್ಟುಕೊಳ್ಳಿ. ಎಲೆ ಹಸಿರು ಬಣ್ಣದ ಕಾಗದದಿಂದ ಹೂವಿನ ಹಿಂದೆ ಇರುವ ಚಿಕ್ಕ ಚಿಕ್ಕ ಎಲೆಗಳಂತೆ ಕಾಣುವಂತೆ ಚೂಪಾಗಿ ಸುತ್ತಲೂ ಕತ್ತರಿಸಿಡಿ.ಗುಲಾಬಿ ಬಣ್ಣದ ಪೇಪರ್ ನಿಂದ ಡಬಲ್ ಪೇಪರ್ ನಿಂದ ದುಂಡಗೆ ಕತ್ತರಿಸಿ ಸುತ್ತಲೂ ಸಣ್ಣ ಸಣ್ಣ ಪಟ್ಟಿಯಂತೆ ಕತ್ತರಿಸಿ ಮೇಲಿನಿಂದ ಕೆಂಪು ಪೆನ್ಸಿಲ್ ನಿಂದ ಸುತ್ತಲೂ ಗೆರೆಗಳನ್ನು ಎಳೆದಿಡಿ.(ಕುಸುಮಕ್ಕೆ) ಈಗ ಐದು ಹೂವಿಗಾಗಿ ಕತ್ತರಿಸಿದ ಪೇಪರ್ ನ್ನು ನೆರಿಗೆಯಂತೆ ಮಾಡಿ ಪಿನ್ ಮಾಡಿ ಇಡಿ. ಇದೇ ರೀತಿ ಐದು ಎಲೆಗಳಿಗೆ ಕತ್ತರಿಸಿದ ಹಸಿರು ಬಣ್ಣದ ಕಾಗದದಿಂದ ಮೂಲೆಯಿಂದ ಮೂಲೆಗೆ ನೆರಿಗೆಯಿಟ್ಟು ಮಡಚಿ ಪಿನ್ ಮಾಡಿ.ಈಗ ಎಲೆ ಹಸಿರು ಬಣ್ಣದ ಕತ್ತರಿಸಿದ ಕಾಗದದಮೇಲೆ ಮಧ್ಯದಲ್ಲಿ ಅಂಟು ಹಾಕಿ ಹಳದಿ ಬಣ್ಣದ ಐದು ರೆಕ್ಕೆಗಳನ್ನು ಚಿತ್ರದಲ್ಲಿ ತೋರಿಸಿರುವಂತೆ ಅಂಟಿಸಿ ಮಧ್ಯಕ್ಕೆ ಗುಲಾಬಿ ಬಣ್ಣದ ಕತ್ತರಿಸಿದ ಗೋಲಾಕಾರದ ಪೀಸನ್ನು ಅಂಟಿಸಿ. ಮೊದಲು ಸ್ಟೀಲ್ ತಟ್ಟೆಗೆ ಈ ಹೂವನ್ನು ಅಂಟಿಸಿ ಮಿಕ್ಕ ಐದು ಪಿನ್ ಮಾಡಿದ ಗುಲಾಬಿ ಬಣ್ಣದ ಹೂವುಗಳನ್ನು ಜೋಡಿಸಿ, ಅದರ ಹಿಂದೆ ಪಿನ್ ಮಾಡಿದ ಗಿಣಿ ಹಸಿರು ಬಣ್ಣದ ಎಲೆಗಳನ್ನು ಹೂವಿನ ಹಿಂದೆ ಇಡಿ.ಈ ರೀತಿ ಹೂವು ಎಲೆಗಳನ್ನು ಮಾಡಿಟ್ಟುಕೊಂಡಿದ್ದರೆ ಬೇರೆ ಬೇರೆ ಆಕಾರದ ತಟ್ಟೆಯಲ್ಲಿ ಬೇರೆ ಬೇರೆ ರೀತಿ ಜೋಡಿಸಿಡಬಹುದು. ಕಾರ್ಯಕ್ರಮ ಮುಗಿದ ನಂತರ ಮತ್ತೆ ರಟ್ಟಿನ ಡಬ್ಬದಲ್ಲಿ ತೆಗೆದಿಟ್ಟರೆ ಮುಂದಿನ ಸಲ ಉಪಯೋಗಿಸಿಕೊಳ್ಳಬಹುದು. ■